ದಿನಾಂಕ :16-04-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಆರೋಪಿತನ ಪರ ಶ್ರೀ.ಆರ್.ಎಮ್.ಪಿ ವಕೀಲರಿಂದ**

ಆರೋಪಿ ಗೌಂಡಿ ಕೆಲಸ ಮಾಡಲು ನಿಮ್ಮ ಮನೆಯ ಬಳಿ ಬರುತ್ತಿದ್ದರು ಎಂದು ಹೇಳಿದ್ದೀರಿ ಆ ಸಮಯದಲ್ಲಿ ನಿಮ್ಮ ಮನೆಗೆ ಬಂದು ಹೋಗುತ್ತಿದ್ದರೇ ಎನ್ನುವುದಕ್ಕೆ ಸಾಕ್ಷಿ ಹೌದು ಎಂದು ಉತ್ತರಿಸಿದ್ದಾರೆ. ಆರೋಪಿ ಮತ್ತು ನನ್ನ ಮಗಳು ಎರಡು ವರ್ಷದಿಂದ ಪ್ರೀತಿ ಮಾಡುತ್ತಿದ್ದರು. ಆರೋಪಿ ನನ್ನ ಮಗಳನ್ನು ಮದುವೆ ಮಾಡಿಕೊಳ್ಳುವ 6 ತಿಂಗಳ ಮೊದಲು ಆಕೆಯನ್ನು ಆರೋಪಿ ಪ್ರೀತಿ ಮಾಡುತ್ತಿದ್ದ ವಿಚಾರ ಗೊತ್ತಾಯಿತು.

2. ನಂತರ ನಾನು ಊರಿನ ಹಿರಿಯರನ್ನು ಸೇರಿಸಿ ಆರೋಪಿಗೆ ಮತ್ತು ನನ್ನ ಮಗಳಿಗೆ ಬುದ್ಧಿ ಹೇಳಿಸಿದ್ದೇನೆ. ಆ ನಂತರವೂ ಸಹ ಅವರಿಬ್ಬರೂ ಪ್ರೀತಿ ಮಾಡುತ್ತಿದ್ದರು. ಆರೋಪಿ ನನ್ನ ಮಗಳನ್ನು ಪ್ರೀತಿ ಮಾಡುತ್ತಿದ್ದ ಕಾರಣ ನನ್ನ ಕುಟುಂಬದ ಬಗ್ಗೆ ಮತ್ತು ನನ್ನ ಜಾತಿಯ ಬಗ್ಗೆ ಆರೋಪಿಗೆ ತಿಳಿದಿತ್ತು ಎನ್ನುವುದು ಸರಿ. ನನಗೂ ಮತ್ತು ನನ್ನ ಮಗಳಿಗೂ ಸಹ ಆರೋಪಿಯ ಜಾತಿಯ ಬಗ್ಗೆ ತಿಳಿದಿತ್ತು ಎನ್ನುವುದು ಸರಿ. ಆದರೂ ಸಹ ನನ್ನ ಮಗಳು ಆರೋಪಿಯನ್ನು ಪ್ರೀತಿ ಮಾಡುತ್ತಿದ್ದಳು ಎನ್ನುವುದು ಸರಿ.

3. ಆರೋಪಿಯು ತನ್ನ ಕುಟುಂಬ ಸದಸ್ಯರನ್ನು ನಮ್ಮ ಮನೆಗೆ ಕರೆದುಕೊಂಡು ಬಂದು ನನಗೆ ಪರಿಚಯ ಮಾಡಿಸಿದ್ದರು. ಆರೋಪಿ ನನ್ನ ಮಗಳಿಗೆ ಫೋನ ಮಾಡುತ್ತಿದ್ದನು ಎನ್ನುವ ವಿಚಾರವನ್ನು ನಾನು ಪೋಲಿಸರ ಮುಂದೆ ಹೇಳಿರುವುದಿಲ್ಲ. ಆರೋಪಿ ನನ್ನ ಮಗಳನ್ನು ಓಡಿಸಿಕೊಂಡು ಹೋಗುತ್ತೇನೆ ಎಂದು ನನ್ನ ಮುಂದೆ ಧಮಕಿ ಹಾಕಿರುವುದಿಲ್ಲ ಎಂದು ಸೂಚಿಸುವುದು ಸರಿ.

4. ಆರೋಪಿ ನನ್ನ ಮಗಳನ್ನು ಪ್ರೀತಿ ಮಾಡುವ ವಿಚಾರ ಗೊತ್ತಾದ ನಂತರ ನಾನು ನನ್ನ ಮಗಳಿಗೆ ಬೇರೆ ಕಡೆಗೆ ವರನನ್ನು ನೋಡಿ ಮದುವೆ ಮಾಡಲು ಪ್ರಯತ್ನ ಪಟ್ಟಿದ್ದೇನು.

ಆದರೂ ನನ್ನ ಮಗಳು ಆರೋಪಿತನನ್ನು ಮದುವೆ ಮಾಡಿಕೊಳ್ಳುತ್ತೇನೆ ಎಂದು ಹಟ ಹಿಡಿದಿದ್ದಳು. ಆ ಸಮಯದಲ್ಲಿ ನಾನು ನನ್ನ ಮಗಳಿಗೆ ಮತ್ತು ಆರೋಪಿಗೆ ಹೊಡೆದು ಬುದ್ಧಿ ಹೇಳಿದ್ದೇನು ಎನ್ನುವುದು ಸರಿ. ನನ್ನ ಮಗಳನ್ನು ನಮ್ಮ ಜಾತಿಯ ವರನಿಗೆ ಕೊಟ್ಟು ಮದುವೆ ಮಾಡಿಕೂಡುವುದು ನನಗೆ ಇಷ್ಟ ಇತ್ತು ಮತ್ತು ಆರೋಪಿ ಜೊತೆಗೆ ಮದುವೆ ಮಾಡಿಕೊಡುವುದು ಇಷ್ಟ ಇರಲಿಲ್ಲ ಎನ್ನುವುದು ಸರಿ.

5. ನಾನು ನನ್ನ ಮಗಳಿಗೆ ಆರೋಪಿಯನ್ನು ಬಿಟ್ಟು ಬಿಡು ಎಂದು ಹೇಳಿದ್ದರೂ ಸಹ ನನ್ನ ಮಗಳು ಕೇಳುತ್ತಿರಲಿಲ್ಲ ಎನ್ನುವುದು ಸರಿ. ನಾನು ನನ್ನ ಮಗಳಿಗೆ ಆರೋಪಿಯನ್ನು ಮರೆತು ಬಿಡು ನಾವು ಬೇರೆ ಮದುವೆ ಮಾಡಿಕೊಡುತ್ತೇವೆ ಎಂದು ಹೇಳಿದ್ದರಿಂದ ಆತಳು ಆತ್ಮಹತ್ಯೆಗೆ ಪ್ರಯತ್ನ ಪಟ್ಟಿದ್ದಳು ಎನ್ನುವುದು ಸರಿ. ನನ್ನ ಮಗಳು ಸಿಟ್ಟಿನ ಮತ್ತು ಮುಂಗೋಪ ಸ್ವಭಾವದವಳು ಎನ್ನುವುದು ಸರಿ. ಆ ಕಾರಣ ನಮ್ಮ ಮನೆಯವರು ಮತ್ತು ಆರೋಪಿತರ ಮನೆಯವರು ಸೇರಿ ಆರೋಪಿತನೊಂದಿಗೆ ಮದುವೆ ಮಾಡಿಕೊಟ್ಟರು ಎನ್ನುವುದು ಸರಿ.

6. ಮದುವೆ ಆದ ನಂತರ ಒಂದು ವಾರದವರೆಗೆ ನನ್ನ ಮಗಳು ಆರೋಪಿತನ ಮನೆಯಲ್ಲಿ ಇದ್ದಳು. ನಂತರ ಅವರು ಶಹಾಪೂರದಲ್ಲಿ ಮನೆ ಮಾಡಿಕೊಂಡು ವಾಸವಾಗಿದ್ದರು. ಆ ಸಮಯದಲ್ಲಿ ನನ್ನ ಮಗಳು ಮತ್ತು ಆರೋಪಿ ಸಂತೋಷದಿಂದ ಸಂಸಾರ ನಡೆಸುತ್ತಿದ್ದರು ಎನ್ನುವುದು ಸರಿ. ನನ್ನ ಮಗಳು ಮತ್ತು ಆರೋಪಿ ಶಹಾಪೂರದಲ್ಲಿ ವಾಸವಾಗಿದ್ದಾಗ ನಾನು ಆಗಾಗ ಅವರನ್ನು ಭೇಟಿ ಮಾಡಿ ಬರುತ್ತಿದ್ದೇನು. ನಾನು ಸುಮಾರು 2 – 3 ಸಾರಿ ಅವರನ್ನು ಭೇಟಿ ಮಾಡಿದ್ದೇನೆ.

7. ಮುಚ್ಚಂಡಿ ಗ್ರಾಮದ ಆರೋಪಿ ಮನೆಯಲ್ಲಿ ಮದುವೆ ನಂತರ ಸತ್ಯನಾರಾಯಣ ಪೂಜೆ ಇದ್ದು, ಅದಕ್ಕೆ ಆರೋಪಿ ಮನೆಯವರು ನನ್ನನ್ನು ಕರೆದಿದ್ದರು ಆದರೆ ನಾನು ಹೋಗಿರಲಿಲ್ಲ. ನನ್ನ ಮಗಳು ಮತ್ತು ಆರೋಪಿ ಆ ಪೂಜೆಗೆ ಹೋಗಿದ್ದರು. ಆ ದಿನ ನನ್ನ ಮಗಳು ಮತ್ತು ಆರೋಪಿತರು ಬೆಳಗ್ಗೆ ಹೋಗಿ ಸಂಜೆ ವಾಪಸ್ಸು ಬಂದಿದ್ದರು.

8. ನಾನು, ನಮ್ಮ ಮನೆಯವರು ಮತ್ತು ಆರೋಪಿತರ ಮನೆಯವರು ಸೇರಿ ಆರೋಪಿತನಿಗೆ ನನ್ನ ಮಗಳನ್ನು ಮದುವೆ ಮಾಡಿಕೊಟ್ಟಿದ್ದರಿಂದ ಆರೋಪಿ ಮನೆಯವರು ನನ್ನ ಮಗಳಿಗೆ ನೀನು ಬೇರೆ ಜಾತಿಯವಳು, ನೀನು ಉಟ್ಟ ಬಟ್ಟೆಯಲ್ಲಿ ಬಂದಿದ್ದಿಯಾ ಎಂದು, ಹಿಯಾಳಿಸುತ್ತಿರಲಿಲ್ಲ ಎನ್ನುವುದು ಸರಿ. ಆರೋಪಿ ಸಹ ನನ್ನ ಮಗಳಿಗೆ ಹೊಡೆಯುವುದು ಬಡೆಯುವುದು, ಕೀಳು ಜಾತಿಯವಳು ಎಂದು ಬೈಯುತ್ತಿರಲ್ಲಿ ಎಂದು ಸೂಚಿಸುವುದು ಸರಿ.

9. ನನ್ನ ಮಗಳು ಅವಳ ಗಂಡನ ಮನೆಗೆ ಹೋದ ನಂತರ 2 – 3 ಸಾರಿ ಫೋನ್ ಮಾಡಿದ್ದಳು, ಆ ಸಮಯದಲ್ಲಿ ಆರೋಪಿ ಅವಳಿಗೆ ತೊಂದರೆ ಕೊಡುತ್ತಿರಲಿಲ್ಲ ಎಂದು ಹೇಳುತ್ತಿದ್ದಳು ಎನ್ನುವುದು ಸರಿ. ನಾನು, ಆರೋಪಿ ಮತ್ತು ನನ್ನ ಮಗಳನ್ನು ನಮ್ಮ ಮನೆಗೆ ಕರೆಯಿಸಿ, ಆರೋಪಿತನಿಗೆ ಬುದ್ಧಿ ಹೇಳಿರಲಿಲ್ಲ ಎಂದು ಸೂಚಿಸುವುದು ಸರಿ. ನನ್ನ ಮಗಳು ತೀರಿಕೊಂಡ ದಿನಾಂಕ ನನಗೆ ನೆನಪಿಲ್ಲ.

10. ನನ್ನ ಅಣ್ಣ ಬೈಲಹೊಂಗಲಿನ ಮುರಗೋಡನ ಆಸ್ಪತ್ರೆಯಲ್ಲಿ ದಾಖಲಾಗಿದ್ದನು. ನಾನು ಆಸ್ಪತ್ರೆಯಿಂದ ಬಂದ ಕೂಡಲೇ ನಾನು ನನ್ನ ಮಗಳಿಗೆ ಫೋನ್ ಮಾಡಿರಲಿಲ್ಲ. ನನ್ನ ಮಗಳ ತೀರಿಕೊಂಡ ದಿನ ರಾತ್ರಿ ಶಹಾಪೂರ ಪೋಲಿಸರು ಫೋನ್ ಮಾಡಿದ್ದರು. ರಾತ್ರಿ ಸುಮಾರು 08:30 ಗಂಟೆಗೆ ಫೋನ್ ಮಾಡಿದ್ದರು. ಪೋಲಿಸರು ನಿಮ್ಮ ಮಗಳು ಸಿರಿಯಸ್ ಆಗಿದ್ದಾಳೆ ಬನ್ನಿ ಎಂದು ಫೋನ್ ಮಾಡಿದ್ದರು . ನಾನು ಮತ್ತು ನನ್ನ ಅಳಿಯ

ಬೈಕ್‌ನಲ್ಲಿ ನನ್ನ ಮಗಳು ವಾಸ ಇದ್ದ ಶಹಾಪೂರದ ಅಳವಣ ಗಲ್ಲಿಗೆ ಹೋಗಿದ್ದೇವು. ನನಗೆ ಫೋನ್ ಬಂದ 10 – 15 ನಿಮಿಷದಲ್ಲಿ ಸ್ಥಳಕ್ಕೆ ಹೋಗಿದ್ದೇನು. ನಾನು ಸ್ಥಳಕ್ಕೆ ಹೋದಾಗ ಪೋಲಿಸ ಗಾಡಿಗಳು ಇದ್ದವು, ಅಂಬ್ಯುಲೆನ್ಸ ಇತ್ತು. ನಾನು ನನ್ನ ಮಗಳ ಮನೆಗೆ ಹೋದಾಗ ಅಲ್ಲಿ ಪೋಲಿಸರು ಮತ್ತು ಗಲ್ಲಿಯಲ್ಲಿಯ ಜನರು ಇದ್ದರು. ನಾನು ಪೋಲಿಸರನ್ನು ವಿಚಾರಿಸಿದ್ದೇನೆ. ಆಗ ಪೋಲಿಸರು ನನ್ನ ಮಗಳು ತೀರಿಕೊಂಡಿದ್ದಾಳೆ ಎಂದು ಹೇಳಿದರು. ನನಗೆ ಮನಸ್ಸಿಗೆ ಬೇಜಾರಾಗಿದ್ದರಿಂದ ತಲೆ ಚಕ್ಕರ ಬಂದು ಬಿದ್ದೇನು, ನನಗೆ ಲೋ ಬಿಪಿ ಆಗಿತ್ತು, ನನಗೆ ಮಾತನಾಡಲು ಆಗುತ್ತಿರಲಿಲ್ಲ, ಆದ್ದರಿಂದ ನನಗೆ ತ್ರಾಸ ಆಗುತ್ತಿತ್ತು, ಆ ಕಾರಣ ಮಗಳ ಶವವನ್ನು ನೋಡಲಿಲ್ಲ. ಮೊದಲನೇ ಬಾರಿಗೆ ನಾನು ಮಗಳ ಶವವನ್ನು ಸಿವಿಲ್ ಆಸ್ಪತ್ರೆಯಲ್ಲಿ ನೋಡಿದ್ದೇನೆ.

11. ದೂರು ನೀಡಲು ನಾನು ಮತ್ತು ನನ್ನ ಅಳಿಯ ಹೋಗಿದ್ದೇವು. ಪೋಲಿಸ ಠಾಣೆಗೆ ಹೋದ ನಂತರ ನಾನು ದೂರನ್ನು ಬರೆಸಿದ್ದೇನೆ. ದೂರು ಬರೆಯಲು ನಾನು ಮಾಹಿತಿಯನ್ನು ನೀಡರಿಲಿಲ್ಲ ಎಂದು ಸೂಚಿಸುವುದು ಸರಿ. ನನ್ನ ಮುಂದೆ ದೂರನ್ನು ಬರೆದಿರುವುದಿಲ್ಲ ಎನ್ನುವುದು ಸರಿ. ಪೋಲಿಸರು ಸಹಿ ಮಾಡಲು ಹೇಳಿದ್ದರಿಂದ ನಾನು ಸಹಿ ಮಾಡಿದ್ದೇನೆ ಎನ್ನುವುದು ಸರಿ. ದೂರಿನಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎನ್ನುವುದು ಸರಿ. ದೂರನ್ನು ನನಗೆ ಓದಿ ಹೇಳಿಲ್ಲ ಎನ್ನುವುದು ಸರಿ.

12. ಪೋಲಿಸರು ನನ್ನ ಹೇಳಿಕೆಯನ್ನು ಪಡೆದಿರುವುದಿಲ್ಲ. ಮರುದಿನ ಪೋಲಿಸರು ನಿಮ್ಮನ್ನು ನಿಲ್ಲಿಸಿ ಪೋಟೋ ತೆಗೆದಿದ್ದಾರೆ ಎಂದು ಹೇಳಿದ್ದೀರಿ, ಯಾವ ಕಾರಣಕ್ಕೆ ತೆಗೆದರು ಎಂದು ನನಗೆ ಹೇಳಲು ಆಗುವುದಿಲ್ಲ ಎನ್ನುವುದು ಸರಿ . ಪೋಲಿಸರು ನನಗೆ ನಿಲ್ಲಲ್ಲು ಹೇಳಿದ್ದರಿಂದ ನಾನು ನಿಂತಿದ್ದೇನು ಮತ್ತು ಪೋಲಿಸರು ಫೋಟೋ ತೆಗೆದರು ಎನ್ನುವುದು ಸರಿ. ಮರುದಿನ ಪೋಲಿಸರು ನನಗೆ ಶಹಪೂದಲ್ಲಿರುವ ನನ್ನ ಮಗಳ ಮನೆಗೆ ಕರೆಸಿದ್ದು, ಅಲ್ಲಿ ಯಾವ ಕಾರಣಕ್ಕೆ ಪೋಟೋ ತೆಗೆದರು ಎಂದು ನನಗೆ ಗೊತ್ತಿಲ್ಲ ಎನ್ನುವುದು ಸರಿ.

ನಾನು ಪೋಲಿಸರಿಗೆ ಯಾವುದೇ ಸ್ಥಳ ತೋರಿಸಿರುವುದಿಲ್ಲ. ಪೋಲೀಸರು ನನ್ನ ಮುಂದೆ ಪಂಚನಾಮೆ ಮಾಡಿಲ್ಲ ಎನ್ನುವುದು ಸರಿ. ನನ್ನ ಮಗಳು ಯಾವ ಕಾರಣಕ್ಕಾಗಿ ತೀರಿಕೊಂಡಳು ಎಂದು ನನಗೆ ಗೊತ್ತಿಲ್ಲ ಎಂದು ಸೂಚಿಸುವುದು ಸರಿ. ಆರೋಪಿ ನನ್ನ ಮಗಳ ಕುತ್ತಿಗೆ ಹಿಸುಕಿ ಕೊಲೆ ಮಾಡಿದ್ದಾನೆ ಎಂದು ಪೋಲಿಸರು ನನಗೆ ಹೇಳಿದ್ದರ ಪ್ರಕಾರ ನಾನು ಹೇಳುತ್ತಿದ್ದೇನೆ ಎನ್ನುವುದು ಸರಿ.

**ಮರು ವಿಚಾರಣೆಃ** ಸಾಕ್ಷಿದಾರರು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಕ್ಕೆ ವ್ಯತಿರಿಕ್ತವಾಗಿ ಪಾಟೀ ಸವಾಲಿನಲ್ಲಿ ಉತ್ತರಿಸಿದ್ದರಿಂದ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಮನವಿ ಮಾಡಿರುತ್ತಾರೆ. ಸಾಕ್ಷಿಯ ಹೇಳಿಕೆ ಪರಿಗಣಿಸಿ ಅನುಮತಿಯನ್ನು ನೀಡಲಾಯಿತು.

**ಮುಂದುವರೆದ ಪಾಟೀ ಸವಾಲು: ವಿಶೇಷ ಸರ್ಕಾರಿ ಅಭಿಯೋಜಕರಿಂದ**

1. ನಾನು ಈ ಹಿಂದೆ ನ್ಯಾಯಾಲಯದಲ್ಲಿ ನನ್ನ ಮಗಳು ಬಂದು ಆಕೆಯ ಅತ್ತೆಯ ಮನೆಯಲ್ಲಿ ಅಂದರೆ ಆರೋಪಿಯ ಮನೆಯಲ್ಲಿ ಅವರ ತಾಯಿ, ತಂಗಿ, ಆಕೆಗೆ ಹೀಯಾಳಿಸಿ ಬೈಯುತ್ತಿದ್ದರು ಎಂದು, ಆರೋಪಿ ಸಹ ಅವರ ಮಾತು ಕೇಳಿ ನನ್ನ ಮಗಳಿಗೆ ಹೊಡೆಯುವುದು, ಬೈಯುವುದು, ನೀನು ಕೀಳು ಜಾತಿಯವಳು ಎಂದು ಹೇಳುತ್ತಿದ್ದರು ಎಂದು, ನನ್ನ ಮಗಳಿಗೆ ಆತನೊಂದಿಗೆ ವಾಸ ಮಾಡಲು ಕಷ್ಟ ಆಗುತ್ತಿದೆ ಎಂದು ನನ್ನ ಮುಂದೆ ಹೇಳಿದ್ದಳು ಎಂದು ನಾನು ಹೇಳಿಕೆ ನೀಡಿದ್ದೇನೆ ಎನ್ನುವುದಕ್ಕೆ ಸಾಕ್ಷಿಯು ಹೌದು ಎಂದು ಉತ್ತರಿಸಿದ್ದಾರೆ. ಅದೇ ರೀತಿ ಆರೋಪಿಯ ಮನೆಗೆ ಹೋಗಿ ಆರೋಪಿಗೆ ಬುದ್ಧಿ ಹೇಳಿದ್ದೇನೆ ಎನ್ನುವುದು ಸರಿ.

2. ನನ್ನ ಮಗಳು ನನಗೆ ಫೋನ್ ಮಾಡಿ ಆಕೆಗೆ ಆರೋಪಿಯೊಂದಿಗೆ ಇರಲು ಆಗುತ್ತಿಲ್ಲ ಎಂದು, ಆತನು ತೊಂದರೆ ಕೊಡುತ್ತಿದ್ದಾನೆ ಎಂದು, ಅವಳು ನನಗೆ ಕರೆದುಕೊಂಡು ಹೋಗಿ ಎಂದು ಹೇಳಿದ್ದಳು ಎಂದು ಪ್ರಶ್ನೆ ಕೇಳಿದ್ದಕ್ಕೆ ಸಾಕ್ಷಿಯು ಯಾವುದೇ ಉತ್ತರ ನೀಡದೇ ಸುಮ್ಮನೆ ಮೌನ ವಹಿಸಿದ್ದಾರೆ. ಪುನಃ ಅದೇ ಪ್ರಶ್ನೆ ಕೇಳಲಾಗಿ ನನಗೆ ನೆನಪಿಲ್ಲ ಎಂದು ಹೇಳಿದ್ದಾರೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ನನ್ನ ಮಗಳ ಮನೆಗೆ ಹೋದಾಗ ಆಕೆಯ ಶವ ಚಾಪೆಯ ಮೇಲೆ ಇತ್ತು, ನಾನು ನೋಡಿದ್ದೇನೆ ಎಂದು ಹೇಳಿದ್ದಕ್ಕೆ ಸಾಕ್ಷಿಯು ಅದನ್ನು ಈಗ ನನಗೆ ನೆನಪಿಲ್ಲ ಎಂದು ಹೇಳಿದ್ದಾರೆ.

3. ನನ್ನ ಮಗಳ ಕುತ್ತಿಗೆಯಲ್ಲಿ ಹೆಬ್ಬಳಿರಿನ ಗುರುತು ಇತ್ತು ಅದನ್ನು ನಾನು ನೋಡಿ ಶಹಾಪೂರ ಪೋಲೀಸರಿಗೆ ಫೋನ್ ಮಾಡಿ, ವಿಚಾರ ತಿಳಿಸಿದ ನಂತರ ಪೋಲಿಸರು ಸ್ಥಳಕ್ಕೆ ಬಂದರು ಎಂದು ಹೇಳಿದ್ದಿರಿ ಎನ್ನುವುದಕ್ಕೆ ಸಾಕ್ಷಿಯು ಮೌನ ವಹಿಸಿದ್ದಾರೆ. ನಂತರ ಸುಧಾರಿಸಿಕೊಂಡು ನನಗೆ ನೆನಪಿಲ್ಲ ಎಂದು ಹೇಳಿದ್ದಾರೆ.

4. ನಾನು ಪೋಲಿಸ ಠಾಣೆಗೆ ಹೋಗಿ ಉಮೇಶ ರವರಿಗೆ ಹೇಳಿ ದೂರನ್ನು ಬರೆಸಿ ಕೊಟ್ಟಿದ್ದೇನೆ ಎನ್ನುವುದಕ್ಕೆ ಸಾಕ್ಷಿಯು ಮೌನವಾಗಿ ತಲೆ ತಗ್ಗಿಸಿ ನಿಂತಿದ್ದಾರೆ.

5. ನನ್ನ ಮಗಳ ಶವ ಇದ್ದ ಸ್ಥಳವನ್ನು ನಾನೇ ಪೋಲಿಸರಿಗೆ ತಿಳಿಸಿದ್ದೇನೆ, ಪೋಲಿಸರು ಅಲ್ಲಿ ಪಂಚನಾಮೆ ಮಾಡಿದ್ದಾರೆ ಮತ್ತು ಆ ಸ್ಥಳದಲ್ಲಿ ಫೋಟೋ ತೆಗೆದಿದ್ದಾರೆ ಎನ್ನುವುದಕ್ಕೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ಹೇಳಿದ್ದಾರೆ.

6. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ್ದ ವಿಚಾರಗಳು ಸತ್ಯವಾಗಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಸಲುವಾಗಿ ಈಗ ನೆನಪಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

7. ದಿನಾಂಕಃ 03-07-2021 ರಂದು ತಹಶೀಲ್ದಾರ ರವರ ಮುಂದೆ ಹೇಳಿಕೆ ನೀಡಿದ್ದು, ಅದರಲ್ಲಿ ನನ್ನ ಮಗಳ ಸಾವಿಗೆ ಆರೋಪಿ ಕಾರಣ ಎಂದು ಹೇಳಿಕೆ ನೀಡಿದ್ದೇನೆ ಎನ್ನುವುದಕ್ಕೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ಹೇಳಿದ್ದಾರೆ.

8. " ದಿನಾಂಕಃ 03-07-2021 ರಂದು ನನ್ನ ಮಗಳಿಗೆ ಭೇಟಿ ಆಗುವ ಸಲುವಾಗಿ ನಾನು ಕಳೆದ 3 ದಿನಗಳ ಹಿಂದೆ ಅಳವಣ ಗಲ್ಲಿಗೆ ಬಂದಾಗ ನನ್ನ ಮಗಳು ನನ್ನ ಮುಂದೆ ನಾನು ಗಂಡನ ಮನೆ ಮುಚ್ಚಂಡಿಯಲ್ಲಿದ್ದಾಗ ಲಕ್ಷ್ಮೀಕಾಂತ ಇತನ ಸೋದರ ಅತ್ತೆ, ಲಕ್ಷ್ಮೀಕಾಂತ ಇತನ ಅಕ್ಕ , ಲಕ್ಷ್ಮೀಕಾಂತ ಇತನ ಅಣ್ಣ ಪ್ರಕಾಶ ಇವರು ಎಲ್ಲರೂ ಡೋರ ಕೀಳು ಜಾತಿಯವಳು ಇರುತ್ತಿ ಅದಕ್ಕೆ ನೀನು ಓಡಿ ಬಂದು ಮದುವೆ ಆಗಿರುತ್ತಿ , ನೀನು ಮನೆ ಬಿಟ್ಟು ಹೂರಬಿಳು ಎಂದು ಅಂದಿದ್ದಕ್ಕೆ ನಾನು ಮತ್ತು ನನ್ನ ಗಂಡ ಮರಳಿ ಬೆಳಗಾವಿಗೆ ಬಂದಿರುತ್ತೇವೆ, ಇಲ್ಲಿ ಬಂದ ನಂತರ ನನ್ನ ಗಂಡ ನನಗೆ ಹೊಡೆ ಬಡೆ ಮಾಡಿ ನನಗೆ ತ್ರಾಸ ಕೊಡುತ್ತಿದ್ದಾನೆ ಎಂದು ಅಳುತ್ತಾ ಹೇಳಿದ್ದಳು. " ಎಂದು ತಹಶೀಲ್ದಾರ ಮುಂದೆ ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ-5 ಎಂದು ಗುರುತಿಸಲಾಯಿತು. ( ಸಾಕ್ಷಿಯು ಸಾಕ್ಷಿ ಕಟ್ಟೆಯಲ್ಲಿ ಕಣ್ಣೀರು ಹಾಕುತ್ತಿದ್ದಾಳೆ) .

9. ನಾನು ಮನೆಯಲ್ಲಿದ್ದಾಗ ರಾತ್ರಿ 08:15 ರ ಸುಮಾರಿಗೆ ಮುಚ್ಚಂಡಿಯಿಂದ ಪ್ರಕಾಶ ಗುಣವಂತ ಇತನು ಪೋನ್ ಮಾಡಿ ಲಕ್ಷ್ಮೀಕಾಂತ ಇತನಿಗೆ ಬಹಳಷ್ಟು ಸಲ ಪೋನ್ ಮಾಡಿದರೂ Switch off ಬರುತ್ತಿದೆ, ನೀವು ಅಳವಣ ಗಲ್ಲಿಗೆ ಹೋಗಿ ನೋಡಿ ಎಂದು

ಹೇಳಿದ್ದು , ನಾನು ಕೂಡಲೇ ನನ್ನ ಮಗ ಸಂತೋಷನಿಗೆ ಮತ್ತು ನನ್ನ ಅಳಿಯ ಪ್ರಶಾಂತ ಇತನಿಗೆ ಕರೆದುಕೊಂಡು ಮಗಳ ಮನೆಗೆ ಬಂದಾಗ ರಾತ್ರಿ 08:40 ಗಂಟೆ ಆಗಿತ್ತು, ಮನೆಯ ಮುಂದಿನ ಬಾಗಿಲು ಸ್ವಲ್ಪ ತೆರೆದಿದ್ದು, ಜ್ಯೋತಿ ಇವಳು ಒಳಗೆ ಅಂಗಾತ ಮಲಗಿದ್ದ ಸ್ಥಿತಿಯಲ್ಲಿದ್ದಳು, ಲಕ್ಷ್ಮೀಕಾಂತ ಮನೆಯಲ್ಲಿ ಇರಲಿಲ್ಲ, ನಾವು ಕೂಡಲೇ ಗಾಬರಿ ಆಗಿ ಅಂಬ್ಯುಲೆನ್ಸಗೆ ಫೋನ ಮಾಡಿದಾಗ ಅಂಬ್ಯುಲೆನ್ಸ ಬಂದಿದ್ದು ಆಗ ಅವಳ ಮುಖವನ್ನು ಹತ್ತಿರದಿಂದ ದಿಟ್ಟಿಸಿ ನೋಡಿದಾಗ ಅವಳ ಕುತ್ತಿಗೆಯ ಮೇಲೆ ಕಪ್ಪು ಕಲೆ ಆಗಿದ್ದು ಕಂಡು ಬಂದಿದ್ದು , ಆಗ ನನ್ನ ಮಗಳು ಜ್ಯೋತಿ ಇತಳಿಗೆ ಲಕ್ಷ್ಮೀಕಾಂತ ಇತನು ಕೈಯಿಂದ ಕುತ್ತಿಗೆ ಹಿಸುಕಿ ಅಥವಾ ಯಾವುದಾದರು ವಸ್ತುವಿನಿಂದ ಕುತ್ತಿಗೆಗೆ ಬಿಗಿದು ಉಸಿರುಗಟ್ಟಿಸಿ ಓಡಿ ಹೋದ ಬಗ್ಗೆ ಖಾತ್ರಿ ಆಯಿತು ಎಂದು ತಹಶೀಲ್ದಾರ ರವರ ಮುಂದೆ ಹೇಳಿಕೆ ನೀಡಿದ್ದೇನೆ ಎನ್ನುವುದಕ್ಕೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ಹೇಳಿದ್ದಾರೆ. ನಾನು ಈಗ ಮೇಲೆ ಹೇಳಿದ ರೀತಿಯಲ್ಲಿ ತಹಶೀಲ್ದಾರ ರವರ ಮುಂದೆ ಹೇಳಿಕೆ ನೀಡಿದ್ದರೂ ಸಹ ಈಗ ನೆನಪಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

10. ನನ್ನ ಮುಖ್ಯ ವಿಚಾರಣೆಯ ನಂತರ ಊರಿನಲ್ಲಿ ಹಿರಿಯರು ಸೇರಿ ಪ್ರಕರಣವನ್ನು ಬಗೆ ಹರಿಸಿದ್ದಾರೆ ಆ ಕಾರಣ ನಾನು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

11. ನನ್ನ ಮಗಳು ತೀರಿಕೊಂಡ ನಂತರ ರೂ.8,25,000/- ಪರಿಹಾರ ಹಣ ನನಗೆ ಬಂದಿರುತ್ತದೆ ಎನ್ನುವುದು ಸರಿ.

**ಪ್ರಶ್ನೆಃ** ನಿಮ್ಮ ಮಗಳ ಸಾವಿಗೆ ಕಾರಣ ಗೊತ್ತಿಲ್ಲ ಎಂದು ಹೇಳುತ್ತೀರಿ ಆ ಕಾರಣ ಸರ್ಕಾರದಿಂದ ಪಡೆದಿರುವ ಪರಿಹಾರದ ಹಣ ಸರ್ಕಾರಕ್ಕೆ ವಾಪಸ್ಸು ನೀಡಬೇಕಾಗುತ್ತದೆ ?

**ಉತ್ತರಃ** ಸಾಕ್ಷಿಯು ಯಾವುದೇ ಉತ್ತರ ನೀಡದೇ ಮೌನವಹಿಸಿದ್ದಾರೆ. ಸುಧಾರಿಸಿಕೊಂಡು ನನಗೆ ಗೂತ್ತಾಗುತ್ತಿಲ್ಲ ಎಂದು ಹೇಳಿದ್ದಾರೆ. ನನಗೆ ಏನು ಹೇಳಬೇಕು ಎಂದು ಗೊತ್ತಾಗುತ್ತಿಲ್ಲ ಎಂದು ಉತ್ತರಿಸಿದ್ದಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಬೆಳಗಾವಿ.